SRI S. B. NAGARAL (Minister of State for Minor Irrigation [on behalf of) SRI H. M. CHANNABASAPPA (Minister for Public Works] —

(*a*) Rs. 29.56 lakhs.

(*b*) Rs. 1,21,20) is earmarked out of Lumpsu n Grants.

(*c*) Improvements will be ma le to the extent grants are available

SRI M. MALLIKARJUNA KHARGE.—What is the amount kept f r Yadgir sub-division for various roads for re-concreting and rural communication roads?

† ಶ್ರೀ ಎಸ್. ಬಿ. ನಾಗರಾಳ.—ಈಗಾಗಲೇ ಅದಕ್ಕೆ ೨೯.೫೬ ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳತಕ್ಕದ್ದು ಗುರುಮಿಟಕಲ್ ಮತ್ತು ಯಾದಗಿರಿ ರಸ್ತೆಗೆ ಒಂದು ಲಕ್ಷ ೨೦ ಸಾವಿರ ರೂಪಾಯಿಗಳನ್ನು ನಿಗಧಿ ಮಾಡಲಾಗಿದೆ. ೧೯೭೬-೭೭ನೇ ಸಾಲಿಗೆ ೮೦-೮೧ ಸಾವಿರ ರೂಪಾಯಿ ಒದಗಿಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ.

SRI M. MALLIKARJUNA KHARGE.—Out of Rs. 29.56 lakas how much amount is kept for rural communication roads, how much amount for reconcreting and how much for improvement of roads?

ಶ್ರೀ ಎಸ್. ಬಿ. ನಾಗರಾಳ್.—ಸ್ಪೆಷಲಾಗಿ ೨೧.೧೫ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಐ.ಸಿ.ಆರ್.ಸಿ. ನಲ್ಲಿ ಎಷ್ಟೆಂದರೆ ಲಕ್ಷ ರೂಪಾಯೀಗಳನ್ನು ಅಲಾಟ್ ಮಾಡಿದ್ದಾರೆ.

ಮಳಿಗೆಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಅಂದಾಜುಗಳು

೬೮೫. ಶ್ರೀ ಎ. ನಂಜಪ್ಪ (ಅರಸೀಕೆರೆ).—ಸಹಕಾರ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಸಹಕಾರಿ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಲಾಗುವ ಮಳಿಗೆಗಳ ಅಂದಾಜು ಮೊತ್ತವೆಷ್ಟು, ಇಲಾಖೆಯ ಎಷ್ಟನೇ ವರ್ಷದ ಅಂದಾಜು ಬೆಲೆಗಳು.

(ಆ) ಈಗ ಕಟ್ಟಡಕ್ಕೆ ಬೇಕಾಗುವ ಎಲ್ಲಾ ಪದಾರ್ಥಗಳ ಮತ್ತು ಕೂಲಿ ಇತ್ಯಾದಿಗಳು ಬಹಳ ಜಾಸ್ತಿ ಆಗಿರುವುದರಿಂದ ಸದರಿ ಕಟ್ಟಡಗಳ ಕೆಲಸಕ್ಕೆ ಕಂಟ್ರಾಕ್ಟರುಗಳು ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಈ ಹಿಂದಿನ ಅಂದಾಜುಗಳನ್ನು ಪುನಃ ವಿಮರ್ಶಿಸಿ ಈಗಿನ ಪಿ.ಡಬ್ಲ್ಯೂ.ಡಿ ಅಂದಾಜಿನಂತೆ ಅಂದಾಜು ಮಾಡಿಸಿ ಸದರಿ ಅಂದಾಜು ದರಗಳನ್ನು ಜಾರಿಗೆ ಕೊಡುವ ಪದ್ಧತಿಯನ್ನು ಜಾರಿಗೆ ತರುವುದೇ?

ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಮಂತ್ರಿಗಳು).—

(ಅ) ಮಳಿಗೆಗಳನ್ನು ಕಟ್ಟಲು ಹಣದ ಸಹಾಯವನ್ನು ಒದಗಿಸಿದ ವರ್ಷಕ್ಕೆ ಸಂಬಂಧಪಟ್ಟ ಅಂದಾಜು ಬೆಲೆಗಳು

(ಆ) ಹೌದು.

(ಇ) ಪರಿಶೀಲಿಸಲಾಗುವುದು.

ಶ್ರೀ ಅನಿವಾಳದ ಸಂಜಪ್ಪ —ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರ ಕೊಡುತ್ತಾ ಲೋಕೋಪಯೋಗಿ ಇಲಾಖಾ ಅಂದಾಜಿನಂತೆ ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ. ಕಳೆದ ೧೦-೧೨ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶಗಳ ಸೇವಾ ಸಹಕಾರ ಸಂಘಗಳ ಮಳಿಗೆಗಳನ್ನು ಮಂಜೂರು

ಮಾಡಿದ್ದು, ೨-೩ ಸಾರಿ ಕಟ್ಟಡಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಸ್ತುಗಳ ಬೆಲೆಗಳು ಜಾಸ್ತಿಯಾಗಿದೆ. ರಿವೈಸ್ ಆಗಿರತಕ್ಕ ರೇಟನ್ನು ಅನ್ವಯಿಸದೆ ಕಂಟ್ರಾಕ್ಟ್‌ದಾರರುಗಳು ಬರುತ್ತಿಲ್ಲ. ಕಂಟ್ರಾಕ್ಟ್ ಮಾಡಿ ಕೊಂಡಿರುವ ಕೆಲಪರೂ ಆ ಕೆಲಸವನ್ನು ಬಿಟ್ಟಿ, ಹೋಗಿರುವುದರಿಂದ ನೂರಾರು ಮಳಿಗೆಗಳು ಪೂರ್ತಿ ಯಾಗದೇ ರೈತರಿಗೆ ತೊಂದರೆಯಾಗಿದೆ, ಕೂಡಲೇ ಇದನ್ನು ಪರಿಶೀಲನೆ ಮಾಡಿ ಈಗ ಇರತಕ್ಕ ಲೋಕೋಪಯೋಗಿ ದರವನ್ನು ಅನುಮೋದಿಸಿ, ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

† ಶ್ರೀ ಕೆ.ಎಚ್. ರಂಗನಾಥ್.—ಈಗ ಒಂದು ಮಳಿಗೆಗೆ ೨೦ಸಾವಿರ ರೂಪಾಯಿ ಕೊಡುತ್ತಿದ್ದೇವೆ.

ಶ್ರೀ ಅನಿವಾಳದ ನಂಜಪ್ಪ.— ಸ್ವಾಮಿ. ನಾನು ಹೇಳಿದ್ದು ಏನೆಂದರೆ, ಈ ಮಳಿಗೆ ಕಟ್ಟಡದ ಕಾಮಗಾರಿ ಕೆಲಸಕ್ಕೆ ಈಗ ಪಿ ಡಬ್ಲ್ಯೂ ಡಿ. ರೇಟ್ ಏನು ರಿವೈಸ್ ಆಗಿದೆ. ಆ ರೇಟಿನ ಪ್ರಕಾರ ಕಟ್ಟಡ ಕಟ್ಟುವುದಕ್ಕೆ ಮಂಜೂರಾತಿ ಕೊಡಬೇಕು. ಹಾಗಿಲ್ಲದೇ ಹೋದರೆ ಕಂಟ್ರಾಕ್ಟರುಗಳು ಬರುವುದಿಲ್ಲ, ಈಗ ರೇಟ್ ಜಾಸ್ತಿಯಾಗಿರುವುದರಿಂದ ಒಂದೊಂದು ಗೋಡನ್ಸ್‌ಗೆ 40 ಸಾವಿರ ರೂಪಾಯಿ ಆಗುತ್ತದೆ, ಈಗ ಪಿ.ಡಬ್ಲ್ಯು.ಡಿ. ಅವರು ಒಪ್ಪದೇ ಇರುವುದರಿಂದ ತೊಂದರೆಯಾಗಿದೆ. ಆದ್ದರಿಂದ ತಾವು ಈಗ ಪಿ.ಡಬ್ಲ್ಯು.ಡಿ. ರೇಟ್ ಏನು ರಿವೈಸ್ ಮಾಡಿದ್ದಾರೆ ಅದನ್ನು ಕೊಡುವುದಕ್ಕೆ ಮಂಜೂರಾತಿ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ, ಮಾನ್ಯಸದಸ್ಯರು ಹೇಳಿತಕ್ಕ ರೇಟಿನಷ್ಟು ಜಾಸ್ತಿ ಯಾಗಿಲ್ಲ, ನಾವು ಮಂಜೂರು ಮಾಡಿರುವುದು 100 ಗೋಡನ್ಸ್ 1973-74ರಲ್ಲಿ 2786 ರೂರಲ್ ಗೋಡನ್ಸ್ ಮಂಜೂರು ಮಾಡಿದ್ದೇವೆ, ಈಗ ಉಳಿದಿರತಕ್ಕವು 806 ಮಾತ್ರ, ಮಿಕ್ಕ ಎಲ್ಲವನ್ನು ಮಾಡಿ ಮುಗಿಸಿದೆ. 1975-76ರಲ್ಲಿ ಸುಮಾರು 203 ಗೋಡನ್ಸ್ ಹೊಸದಾಗಿ ಮಂಜೂರು ಮಾಡಿದ್ದೇವೆ ಅದಕ್ಕೆ ಹೊಸ ರೇಟ್ ಕೊಡುತ್ತೇವೆ, ಈಗ ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಡುತ್ತಾರೆ, ಅಂದರೆ ಹಿಂದೆ 15 ಸಾವಿರ ರೂಪಾಯಿ ಆಯಿತು ಕೊಡುತ್ತಿದ್ದರು ಎಂದು ಹೇಳುತ್ತಾರೆ ಆದರೆ ಸೊಸೈಟಿಯವರು ಸ್ವಲ್ಪ ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ ಎಲ್ಲಾ ಸರ್ಕಾರದ ಮೇಲೆ ಅವಲಂಬಿಸಿದರೆ ಆಗುವುದಿಲ್ಲ, ಆಫೀಸ್ ಬಿಲ್ಡಿಂಗ್‌ಗೋಸ್ಕರ ಮಳಿಗೆಗಳಿಗೋಸ್ಕರ ಸ್ವಲ್ಪ ಹಣ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಅನಿವಾಳದ ನಂಜಪ್ಪ.—ಅಧ್ಯಕ್ಷರೇ. ಈಗ ಕಟ್ಟಿಡ ಅರ್ಧ, ಮುಕ್ಕಾಲು ಭಾಗವಾಗಿ ನಿಂತಿರತಕ್ಕಂತಹವೂ ಇವೆ, ಅವುಗಳಿಗೆ ಹಣ ಇಲ್ಲದೇ ಪೂರ್ತಿ ಮಾಡಲಿಕ್ಕೆ ಆಗಿಲ್ಲ. ಅಂತಹ ಸಂಘಗಳಿಗೆ ಹೆಚ್ಚಿಗೆ ರೇಟ್ ಪ್ರಕಾರ ಮಂಜೂರಾತಿ ಕೊಡುವುದಕ್ಕೆ ವಿಚಾರ ಕೊಡುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಭೈರಪ್ಪಾಜಿ.—ಮಾನ್ಯಮಂತ್ರಿಗಳು ಎರಡು ಸಾವಿರ ಚಿಲ್ಲರೆ ಮಂಜೂರಾತಿ ಮಾಡಿ ರುವ ಬಗ್ಗೆ 800 ಕಟ್ಟಡ ಹಾಗೆ ನಿಂತಿವೆ ಎಂದರೆ, ಈಗ 800 ಗೋಡನ್ಸ್ ಏನು ಇವೆ ಅವಕ್ಕೆ ಹನ್ನೆರಡುಸಾವಿರ ಚಿಲ್ಲರೆ ರೂಪಾಯಿ ಕೊಟ್ಟಿದ್ದೀರಿ. ಆರು ಸಾವಿರ ಚಿಲ್ಲರೆ ಸಹಾಯಧನ, ಇನ್ನು ಆರು ಸಾವಿರ ರೂಪಾಯಿ ಲೋನ್ ಎಂದು ತಿಳಿದುಕೊಂಡಿದ್ದೇವೆ, ಮತ್ತೆ, ಆದನ್ನು ಪರಿಶೀಲನೆ ಮಾಡಿ ಈಗ ಉಳಿದಿರತಕ್ಕ 800 ಕಟ್ಟಡಗಳಿಗೆ 20 ಸಾವಿರ ರೂಪಾಯಿಗಳನ್ನು ಕೊಡುವ ಬಗ್ಗೆ ಶೀಘ್ರದಲ್ಲಿ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಈಗ 800 ಗೋಡನ್‌ಗಳು ಬೇರೆ ಬೇರೆ ಹಂತದಲ್ಲವೆ, ಇನ್ನು ಪ್ರಾರಂಭ ಮಾಡಿಲ್ಲ ಎಂದು ಹೇಳಿಲ್ಲ.

ಶ್ರೀ ಬಿ. ಭೈರಪ್ಪಾಜಿ.—ಸ್ವಾಮಿ, ಬೇರೆಬೇರೆ ಹಂತದಲ್ಲಿದ್ದರೂ, ಕೂಡ, ಕೆಲವರು ಕಟ್ಟಲಿಕ್ಕೆ ಸಾಧ್ಯವಾಗಿಲ್ಲ, ಈಗ 12 ಸಾವಿರ ರೂಪಾಯಿ ಕೊಟ್ಟರು ಹಣವಿ ಕೊರತೆ ಇದೆ, ಈಗ ಹಣ ಇಲ್ಲದೇ ನಿಲ್ಲಿಸಿರತಕ್ಕಂತಹವರು, ಹಣ ಕೇಳಿದರೆ ತಾವು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹೆಚ್ ರಂಗನಾಥ್.—ನಾನು ಆಗಲೇ ಹೇಳಿದ್ದೇನೆ. ಸೊಸೈಟಿಯವರು ಸ್ವಲ್ಪ ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ, ಎಲ್ಲ ಸರ್ಕಾರದಮೇಲೆ ಅವಲಂಬಿಸಿಕೊಂಡರೆ ಆಗುವುದಿಲ್ಲ.